# ಮಿಸ್ಟ್ರಾಲ್: ಯಶೋಗಾಥೆ





ರಾಜೀವ್ ರಾಮಚಂದ್ರ


ಅನೀಸ್ ಅಹ್ಮದ್

ದೃಶ್ಯ ಒಂದು: ಪರಿಣತ ಶಸ್ತ್ರಚಿಕಿತ್ಸಕರು, ದೇಹದ ಒಳಗೆ ತೂರಿಸಲಾದ ಪುಟ್ಟ ಕ್ಯಾಮೆರಾ ದೊಡ್ಡ ಪರದೆ ಮೇಲೆ ಮೂಡಿಸುವ ಚಿತ್ರ ನೋಡಿ ಕರಾರುವಾಕ್ಕಾಗಿ ಕತ್ತರಿ ಆಡಿಸುತ್ತಾರೆ. ತಲೆಗೆ 'ಗೋಲ್ಡನ್ ಐ' ಸಾಧನ ಅಳವಡಿಸಿಕೊಂಡು ಅದರ ಪುಟ್ಟ ಪರದೆ ಮೇಲೆ ವಿಶಾಲವಾದ ಪರದೆಯಲ್ಲಿ ಮೂಡುವಂತಹ ದೃಶ್ಯಗಳನ್ನು ಕನ್ನಡಕದ ನೆರವೂ ಇಲ್ಲದೇ ವೀಕ್ಷಿಸುತ್ತ ಇನ್ನೂ ಹೆಚ್ಚು ಜೋಪಾನವಾಗಿ ಸರ್ಜರಿ ಮಾಡಬಹುದು.

ದೃಶ್ಯ ಎರಡು: ಲಾಸ್‌ಏಂಜಲೀಸ್ ಪೊಲೀಸರು ಅಪಘಾತ ಮತ್ತಿತರ ಅಪರಾಧ ಘಟನೆಗಳ ಮಹಜರು ನಡೆಸುವಾಗ ಧ್ವನಿ, ದೃಶ್ಯಗಳೆಲ್ಲ ದಾಖಲಾಗುವ ಪುಟ್ಟ ಯಂತ್ರ ಬಳಸುತ್ತಾರೆ. 'ಎಕ್ಸಾನ್' (axon) ಹೆಸರಿನ ಈ ಸಾಧನವು ಎಲ್ಲವನ್ನೂ ವಿಡಿಯೊ ಚಿತ್ರೀಕರಣ ಮಾಡಿಕೊಂಡಿರುತ್ತದೆ. ಅದನ್ನು ಠಾಣೆಯಲ್ಲಿ ಇರುವ ಸಾಧನದಲ್ಲಿ ದಾಖಲಿಸುತ್ತಿದ್ದಂತೆ ಅದು ಇನ್ನೊಂದೆಡೆ ಸುರಕ್ಷಿತವಾಗಿ ಸಂಗ್ರಹಗೊಳ್ಳುತ್ತದೆ. ದಾಖಲಾದ ದೃಶ್ಯಗಳನ್ನು ಅಪರಾಧಿ ಪರ ವಕೀಲರು ನಿರಾಕರಿಸಲು ಸಾಧ್ಯವೇ ಆಗಲಾರದು. ಕೋರ್ಟ್‌ನಲ್ಲಿ ಬಲವಾದ ಸಾಕ್ಷ್ಯವಾಗಿಯೂ ಇದನ್ನು ಬಳಸಬಹುದು.

ದೃಶ್ಯ ಮೂರು: ದೃಷ್ಟಿಹೀನರು ಸಮಯಕ್ಕೆ ಸರಿಯಾಗಿ ಔಷಧಿ –ಮಾತ್ರೆ ಕೈಗೊಳ್ಳಲು ಮಾತ್ರೆಗಳ ಮೇಲೆ 'ಬಾರ್ ಕೋಡ್' ಆಡಿಸಿದಾಗ ಅದು ಗಟ್ಟಿ ದನಿಯಲ್ಲಿ ಮಾತ್ರೆಯ ಹೆಸರು ಉಚ್ಚರಿಸುತ್ತದೆ...

ಈ ಮೂರೂ ಸಂದರ್ಭಗಳಲ್ಲಿ ಬಳಕೆಯಾಗುವ ನೋಡಲು ಪುಟ್ಟದಾದ ಆದರೆ, ಗರಿಷ್ಠ ಸಾಮರ್ಥ್ಯದ ಇಂತಹ ವಿದ್ಯುನ್ಮಾನ ಸಾಧನಗಳಲ್ಲಿ ಅಳವಡಿಸಿರುವ ಎಂಬೆಡೆಡ್ ಸಾಫ್ಟ್‌ವೇರ್ ಅನ್ನು ಇಬ್ಬರು ಕನ್ನಡಿಗರು 1997ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಿದ 'ಮಿಸ್ಟ್ರಾಲ್' ಸಂಸ್ಥೆಯದು ಎನ್ನುವುದು ಹೆಮ್ಮೆಯ ಸಂಗತಿ.

'ಎಕ್ಸಾನ್' ಮತ್ತು 'ಗೋಲ್ಡನ್ ಐ', ಎಂಬೆಡೆಡ್ ತಂತ್ರಜ್ಞಾನದ ವಿಶ್ವದ 10 ಮುಂಚೂಣಿ ಸಾಧನಗಳಲ್ಲಿ ಸೇರ್ಪಡೆಯಾಗಿವೆ. ಮನರಂಜನೆ, ಆಟೊಮೋಟಿವ್, ಸುರಕ್ಷತೆ, ರಕ್ಷಣಾ ವಲಯ ಹೀಗೆ ಹೊಸ ಜೀವನಶೈಲಿಯ ಅಗತ್ಯಗಳನ್ನೆಲ್ಲ ಒದಗಿಸುವ ಆಧುನಿಕ ವಿದ್ಯುನ್ಮಾನ ಸಾಧನಗಳಲ್ಲಿ 'ಹುದುಗಿರುವ ಕಂಪ್ಯೂಟರ್'ಗೆ ಎಂಬೆಡೆಡ್ ತಂತ್ರಜ್ಞಾನ ಎನ್ನುತ್ತಾರೆ.

ಬಹುತೇಕ ಸಾಫ್ಟ್‌ವೇರ್ ಸಂಸ್ಥೆಗಳಲ್ಲಿ ಎಂಬೆಡೆಡ್ ವಿಭಾಗ ಇದ್ದೇ ಇರುತ್ತದೆ. ಆದರೆ, ಬರೀ ಇದೊಂದೇ ವಿಭಾಗದಲ್ಲಿ ವಹಿವಾಟು ಆರಂಭಿಸಿ ಅದರಲ್ಲಿಯೇ ತಮ್ಮೆಲ್ಲ ಗಮನ ಕೇಂದ್ರೀಕರಿಸಿಕೊಂಡು ಯಶಸ್ವಿಯಾಗಿ ವಹಿವಾಟು ವಿಸ್ತರಿಸಿಕೊಂಡು ಬಂದಿರುವ ದೇಶದ ಏಕೈಕ ಸಂಸ್ಥೆ 'ಮಿಸ್ಟ್ರಾಲ್' ಆಗಿರುವುದು ಇನ್ನೊಂದು ವಿಶೇಷ.

15 ಮಂದಿ ಸಿಬ್ಬಂದಿ, ₹ 3 ಲಕ್ಷ ಬಂಡವಾಳ, 3 ಕಂಪ್ಯೂಟರ್‌ಗಳಿಂದ ವಹಿವಾಟು ಆರಂಭ. ಮೊದಲ ತಿಂಗಳಿನಲ್ಲಿಯೇ ಲಾಭ. 14 ವರ್ಷಗಳಲ್ಲಿ 360 ಸಿಬ್ಬಂದಿ, ಕೋಟಿಗಳ ಲೆಕ್ಕದಲ್ಲಿ ವಹಿವಾಟು, ಐದಾರು ವರ್ಷಗಳಲ್ಲಿ ₹ 5000 ಕೋಟಿ ವಹಿವಾಟಿನ ಕನಸು... ಇವು 'ಮಿಸ್ಟ್ರಾಲ್'ನ ಭವಿಷ್ಯದತ್ತ ನೆಟ್ಟಿರುವ ನೋಟಗಳಾಗಿವೆ.

ಅಮೆರಿಕದ ಕಂಪನಿ ಟೇಸರ್‌ನ ಆದ್ಯತಾ ಗ್ರಾಹಕ ಸಂಸ್ಥೆಯಾಗಿರುವುದರಿಂದ ಇಂತಹ ಯೋಜನೆಗಳು 'ಮಿಸ್ಟ್ರಾಸ್' ಅನ್ನು ಹುಡುಕಿಕೊಂಡು ಬರುತ್ತವೆ. ಆರಂಭದಿಂದಲೂ ಅಮೆರಿಕ ಮಾರುಕಟ್ಟೆ ಮೇಲೆ ಗಮನ ಕೇಂದ್ರಿಕರಿಸಲಾಗಿತ್ತು. ವಿವಿಧ ಬಗೆಯ ಚಿಪ್ ತಯಾರಿಸುವ ಸೆಮಿಕಂಡಕ್ಟರ್ ಸಂಸ್ಥೆಗಳ ಗ್ರಾಹಕರ ಅಗತ್ಯಗಳಿಗೆ ತಕ್ಕಂತೆ 'ಚಿಪ್'ನಲ್ಲಿ ಅಳವಡಿಸುವ ಎಂಬೆಡೆಡ್ ಸಾಫ್ಟ್‌ವೇರ್ ಅನ್ನು ರೂಪಿಸಿ ಪೂರೈಸುತ್ತಿದೆ. ಇದು ಈ ಸಂಸ್ಥೆಯ ವಹಿವಾಟಿನ ಒಟ್ಟಾರೆ ಸ್ವರೂಪ ಆಗಿದೆ.

ಅಂತರರಾಷ್ಟ್ರೀಯ ತಂತ್ರಜ್ಞಾನ ಬ್ರಾಂಡ್ ಮತ್ತು ವೈವಿಧ್ಯಮಯ ಉತ್ಪನ್ನ ಅಭಿವೃದ್ಧಿಪಡಿಸುವ ಜಾಗತಿಕ ಸಂಸ್ಥೆಗಳ ಜೊತೆ ದೀರ್ಘಾವಧಿ ವಹಿವಾಟು ಕುದುರಿಸಿಕೊಂಡು ಪ್ರಗತಿಯ ದೃಢ ಹೆಜ್ಜೆ ಇಡುತ್ತಿದೆ.

ಭವಿಷ್ಯದ ಅತ್ಯಾಧುನಿಕ ತಂತ್ರಜ್ಞಾನದ ಮತ್ತು ಹೊಸ ತಲೆಮಾರಿನ ಸರಕುಗಳ ತಯಾರಿಕೆ ನಿಟ್ಟಿನತ್ತ ರಾಜೀವ್ ರಾಮಚಂದ್ರ (ಸ್ಥಾಪಕ ಮತ್ತು ಉಪಾಧ್ಯಕ್ಷ) ಮತ್ತು ಅನೀಸ್ ಅಹ್ಮದ್ (ಅಧ್ಯಕ್ಷ) ಅವರು ಪರಿಣತ ಎಂಜಿನಿಯರಿಂಗ್ ತಂಡವನ್ನು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ.

ಕಾಲಕ್ಕೆ ತಕ್ಕಂತೆ ಹೊಸ ಹೊಸ ವಹಿವಾಟು ಅವಕಾಶಗಳನ್ನು ಬಳಸಿಕೊಳ್ಳುತ್ತ,

2ನೇ ಪುಟ ನೋಡಿ

...ಒಂದನೇ ಪುಟದಿಂದ

# ಮಿಸ್ಟ್ರಾಲ್: ಯಶೋಗಾಥೆ

ಹೊಸ ಮಾರುಕಟ್ಟೆ ವಿಸ್ತರಿಸುತ್ತ, ಹೊಸ ಬಗೆಯ ತಂತ್ರಜ್ಞಾನ ಬೆಳವಣಿಗೆಗಳತ್ತ 'ಮಿಸ್ಟ್ರಾಸ್' ಮಹತ್ವಾಕಾಂಕ್ಷೆಯ ಕನಸು ನನಸಾಗಿಸಿಕೊಳ್ಳಲು ಹೊರಟಿದೆ.'ಮಿಸ್ಟ್ರಾಸ್' ಮುಖ್ಯವಾಗಿ ಎಂಬೆಡೆಡ್ ತಂತ್ರಜ್ಞಾನದ ವಿನ್ಯಾಸ ರೂಪಿಸಿ ಸಮಗ್ರವಾಗಿ ಒದಗಿಸುತ್ತದೆ. ಉತ್ಪನ್ನದ ಎಂಜಿನಿಯರಿಂಗ್ ಸೇವೆ, ರಕ್ಷಣಾ ಇಲಾಖೆಯ ಅಗತ್ಯಗಳನ್ನು ಮತ್ತು ಸುರಕ್ಷತೆಯ ಸಾಧನಗಳ ತಯಾರಿಕೆಯ ವಿನ್ಯಾಸ ಮತ್ತು 'ಎಂಬೆಡೆಡ್ ಸಾಫ್ಟ್‌ವೇರ್' ಅಭಿವೃದ್ಧಿಪಡಿಸುತ್ತದೆ. ಆಧುನಿಕ ಜೀವನ ಶೈಲಿ ಅಗತ್ಯಗಳಾದ ಎಲ್ಲ ಬಗೆಯ ವಿದ್ಯುನ್ಮಾನ ಸಾಧನಗಳು, ಆಟೊಮೋಟಿವ್ ಎಲೆಕ್ಟ್ರಾನಿಕ್ಸ್‌ಗಳು ಮತ್ತು ವಿಡಿಯೊ ನಿಗಾ ವ್ಯವಸ್ಥೆ - ವಲಯಗಳಲ್ಲಿ ವಹಿವಾಟು ನಡೆಸುತ್ತಿದೆ.

ಸಂಸ್ಥೆಯ ಸ್ಥಾಪಕ ರಾಜೀವ್ ರಾಮಚಂದ್ರ ಅವರ ಜತೆಗಿನ ಸಂದರ್ಶನದ ಆಯ್ದ ಭಾಗಗಳು...

▶ ಮೂಲ ಪ್ರೇರಣೆ ಯಾರು?

-ಬೆಂಗಳೂರಿನ ನಾನು ಮತ್ತು ಶಿವಮೊಗ್ಗ ಮೂಲದ ಅನೀಸ್ ಅಹ್ಮದ್‌ಸಹಪಾಠಿಗಳು. ಜತೆಯಾಗಿ ಏನಾದರೂ ಹೊಸ ಉದ್ದಿಮೆ ಸ್ಥಾಪಿಸಲು ಕನಸು ಕಂಡಿದ್ದೇವು. ಅದಕ್ಕೆ ನನ್ನ ತಂದೆ ಎಸ್. ರಾಮಚಂದ್ರ ಅವರು ಒತ್ತಾಸೆಯಾಗಿ ನಿಂತಿದ್ದರು.

▶ ಸಂಸ್ಥೆಗೆ 'ಮಿಸ್ಟ್ರಾಲ್' ಹೆಸರು ಇಡಲು ಕಾರಣ?

-ಇದೊಂದು ಫ್ರಾನ್ಸ್‌ನಲ್ಲಿ ಬೀಸುವ ಬಿರುಗಾಳಿ ಹೆಸರು. ವಿದೇಶಿ ಸಂಸ್ಥೆಗಳ ಜತೆ ವ್ಯವಹರಿಸುವುದರಿಂದ 'ಮಿಸ್ಟ್ರಾಲ್' ಹೆಚ್ಚು ಸೂಕ್ತವಾದ ಆಯ್ಕೆಯಾಗಿತ್ತು.

▶ ರಫ್ತು ವಹಿವಾಟು ಎಷ್ಟಿದೆ?

-ದೇಶಿ ಮತ್ತು ವಿದೇಶಿ ವಹಿವಾಟು ತಲಾ ಶೇ 50ರಷ್ಟಿದೆ. ಹೀಗಾಗಿ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿಯೂ ನಮ್ಮ ವಹಿವಾಟಿಗೆ ಹೆಚ್ಚಿನ ಧಕ್ಕೆ ಆಗಲಿಲ್ಲ. ವಿಸ್ತರಣೆಗೆ ಕೊಂಚ ಅಡ್ಡಿಯಾಯಿತಷ್ಟೆ.

▶ ನಿಮ್ಮ ಗ್ರಾಹಕರು ಯಾರು?

- ನಮ್ಮ ಎಲ್ಲ ಗ್ರಾಹಕರು ಅಂತರರಾಷ್ಟ್ರೀಯ ಮಟ್ಟದಲ್ಲಿಯೇ ಇದ್ದಾರೆ. ಜತೆಗೆ ಸ್ಥಳೀಯವಾಗಿ ರಕ್ಷಣಾ ಇಲಾಖೆಯ ಅಗತ್ಯಗಳನ್ನೂ ಒದಗಿಸಲಾಗುತ್ತಿದೆ.

▶ 14 ವರ್ಷಗಳಲ್ಲಿನ ವಿಶಿಷ್ಟ ಸಾಧನೆಗಳು ಯಾವವು?

## ಪ್ರಜಾವಾಣಿ ಸಂದರ್ಶನ

ವರ್ಷಕ್ಕೆ ಐದಾರು ವಿನೂತನ ಸಾಧನೆಗಳನ್ನು ಮಾರುಕಟ್ಟೆಗೆ ಪರಿಚಯಿಸುತ್ತೇವೆ. 'ಎಲೆಕ್ಟ್ರಾನಿಕ್ಸ್ ಬ್ಯಾಚ್' ಎನ್ನುವುದು ಇನ್ನೊಂದು ವಿಶಿಷ್ಟ ಸಾಧನ. ಸಮಾವೇಶ ನಡೆಯುವಾಗ ಕೊರಳಲ್ಲಿ ಇದನ್ನು ಧರಿಸಿ ಓಡಾಡಿಕೊಂಡಿದ್ದರೆ, ಪೂರ್ವ ನಿರ್ಧರಿತ ಮಾಹಿತಿ ಆಧರಿಸಿ ನಮ್ಮ ಸಂಪರ್ಕಕ್ಕೆ ಬಂದವರ ಮಾಹಿತಿ ಅದರಲ್ಲಿ ದಾಖಲಾಗಿರುತ್ತದೆ. ನಿರ್ದಿಷ್ಟ ಉದ್ದೇಶದ ವ್ಯಕ್ತಿ ಎದುರಾದರೆ, ಅಂತಹವರನ್ನು ಗುರುತಿಸಲು ನೆರವಾಗುತ್ತದೆ. ಉದ್ದಿಮೆ ವಹಿವಾಟಿಗೆ ಬೇಕಾದವರ ಜತೆ ಏನೊಂದು ಮಾತನಾಡದೇ ಇದ್ದರೂ ಅವರ ವಿವರಗಳೆಲ್ಲ ವಿನಿಮಯಗೊಂಡಿರುತ್ತವೆ. ಕಾರ್ಡ್‌ನಲ್ಲಿನ ವಿವರಗಳನ್ನೆಲ್ಲ ಸುಲಭವಾಗಿ ಕಂಪ್ಯೂಟರ್‌ನಲ್ಲಿ ದಾಖಲಿಸಬಹುದು.

▶ ಜನರಿಗೆ ಹೆಚ್ಚು ಉಪಯುಕ್ತವಾಗುವ ಕೊಡುಗೆ ಏನಿದೆ?

- ರಕ್ಷಣಾ ವಲಯಕ್ಕೆ ಕೊಡುಗೆ ನೀಡುತ್ತ ಬರಲಾಗಿದೆ. ಇ-ಬುಕ್ ರೀಡರ್, ಮನೆಯಲ್ಲಿ ಬಳಸಬಹುದಾದ ವೈದ್ಯಕೀಯ ಉಪಕರಣಗಳು.

▶ ಮಾಹಿತಿ ಕ್ರಾಂತಿಯ ಹಿನ್ನೆಲೆಯಲ್ಲಿ- ಎಂಬೆಡೆಡ್ ಸಾಫ್ಟ್‌ವೇರ್ ವಹಿವಾಟಿನ ಭವಿಷ್ಯ ಹೇಗಿದೆ?

-30 ವರ್ಷಗಳ ಹಿಂದಿನ ಕಂಪ್ಯೂಟರ್‌ಗೆ ಹೋಲಿಸಿದರೆ ಅದರ 10 ಪಟ್ಟು ಸಾಮರ್ಥ್ಯವು ಸದ್ಯದ ಪುಟ್ಟ ಮೊಬೈಲ್‌ಗಳಲ್ಲಿ ಇದೆ. ಯುವಕರಲ್ಲಿ ಆಧುನಿಕ ಜೀವನಶೈಲಿಗೆ ಅನಿವಾರ್ಯವಾದ ಉಪಕರಣಗಳ (ಗ್ಯಾಜೆಜ್) ಮೋಹ ಹೆಚ್ಚುತ್ತಿದೆ. . ಇಂದಿನ ತಂತ್ರಜ್ಞಾನ ನಾಳೆ ಹಳೆಯದಾಗಬಹುದು. ದಿನೇ ದಿನೇ ಜನರ ಅಗತ್ಯಗಳು ಹೆಚ್ಚಾಗುತ್ತಿವೆ. ಖರೀದಿ ಸಾಮರ್ಥ್ಯವೂ ಹೆಚ್ಚಾಗಿರುವುದರಿಂದ ಹೊಸ ಹೊಸ ನಿರೀಕ್ಷೆಗಳು ಗರಿಗೆದರುತ್ತಿವೆ. ಅವುಗಳಿಗೆ 'ಎಂಬೆಡೆಡ್ ಸಾಫ್ಟ್‌ವೇರ್' ನೀರೆರೆಯುತ್ತದೆ.

ಶಾಲೆಗಳಲ್ಲಿ ಕಂಪ್ಯೂಟರ್ ಬಳಕೆ ಸಾಮಾನ್ಯವಾಗಿದೆ. ಆದರೆ, ಎಲ್ಲೆಡೆ ಗುಣಮಟ್ಟದ ಬೋಧಕರ ಕೊರತೆ ಕಂಡುಬರುತ್ತಿದೆ. ಕಲಿಸುವ ಸಾಧನ - ಸಲಕರಣೆಗಳ ಬಳಕೆ ಹೆಚ್ಚುತ್ತಿದೆ. ಹೀಗಾಗಿ ಈ ಉದ್ದಿಮೆಗೆ ಉತ್ತಮ ಭವಿಷ್ಯ ಇದ್ದೇ ಇದೆ.

● ಕೇಶವ ಜಿ. ಝಿಂಗಾಡೆ